KARNATAKA LEGISLATIVE ASSEMBLY, RESEARCH AND REFERENCE BRANCH

PAPER CLIPPINGS

DEPARTMENT / SUBJECT:

NAME OF THE NEWS PAPER: ಕನ್ನಡ ಪ್ರಭ

DATE: 20/10/20

**ಏನಾಗುತ್ತೋ...** 3–4 ದಿನ ಸುರಕ್ಷಿತ ಸ್ಥಳದಲ್ಲಿ ಇರಲು ನಿರ್ಧರಿಸಿದ ಕಲಬುರಗಿ, ಯಾದಗಿರಿ, ವಿಜಯಪುರದ ನೆರೆ ಸಂತ್ರಸ್ತರು

# ಇಳಿಯಿತು ನೆರೆ: ಬರದಿರಲಿ ಮಹಾ ಪ್ರವಾಹ!

## ಭೀಮಾ ನೀರಿನ ಮಟ್ಟ 8 ಅಡಿವರೆಗೆ ಇಳಿಕೆ । ಆದರೂ, ಮಳೆ ಭೀತಿಯಿಂದ ಕಾಳಜಿ ಕೇಂದ್ರದಲ್ಲಿ ಉಳಿದ ಸಂತ್ರಸ್ತರು

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕಳೆದೊಂದು ವಾರದ ಭೀಮೆಯಬ್ಬರ ನಿಧಾನವಾಗಿ ಕಡಿಮೆಯಾಗುತ್ತಿದ್ದು ಕಲಬುರಗಿ, ಯಾದಗಿರಿ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಪ್ರವಾಹದ ಮಟ್ಟ ಸೋಮವಾರ ಮತ್ತಷ್ಟು ಇಳಿಮುಖವಾಗಿದೆ. ಮಳೆ ಕಡಿಮೆಯಾದರೂ, ಪ್ರವಾಹ ಇಳಿಯುತ್ತಿದ್ದರೂ ರಾತ್ರೋರಾತ್ರಿ ಊರು ತೊರೆದಿರುವ ಭೀಮಾ ತೀರದ 43 ಸಾವಿರಕ್ಕೂ ಹೆಚ್ಚು ಮಂದಿ ಮಾತ್ರ ತಮ್ಮ ಮನೆಯತ್ತ ಹೆಜ್ಜೆಹಾಕಲು ಧೈರ್ಯ ತೋರುತ್ತಿಲ್ಲ. ಮೂರ್ನಾಲ್ಕು ದಿನ ಸುರಕ್ಷಿತ ಸ್ಥಳದಲ್ಲೇ ಇರಲು ನಿರ್ಧರಿಸಿರುವ ಬಹುತೇಕ ಸಂತ್ರಸ್ತರು ಮಹಾರಾಷ್ಟ್ರದ ಜಲಾಶಯಗಳಿಂದ ಮತ್ತೆ ಭಾರೀ ನೀರು ಹರಿದು ಬಾರದಿರಲಿ, ಮಳೆ ಬಾರದಿರಲಿ ಎಂದು ಇದ್ದಲ್ಲಿಂದಲೇ ದೇವರಿಗೆ ಮೊರೆ ಇಡುತ್ತಿದ್ದಾರೆ.

ಭೀಮಾ ಪ್ರವಾಹದಿಂದ ಅತೀ ಹೆಚ್ಚು ಬಾಧಿತ ಕಲಬುರಗಿ ಜಿಲ್ಲೆಯಲ್ಲಿ ಈಗಾಗಲೇ 27,278 ಮಂದಿಯನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸಲಾಗಿದೆ.

↘ 7

**43000 ಜನ:** ನೆರೆಯಿಂದಾಗಿ ಮನೆ ತೊರೆದ ಕಲಬುರಗಿ, ಯಾದಗಿರಿ ಮತ್ತು ವಿಜಯಪುರದ ಗ್ರಾಮಸ್ಥರು

**22000 ಮನೆ:** ಭೀಮಾ ನದಿಯಲ್ಲಿ ಪ್ರವಾಹದಿಂದಾಗಿ 3 ಜಿಲ್ಲೆಗಳಲ್ಲಿ ಜಲಾವೃತಗೊಂಡ ಮನೆಗಳು

**5000 ಮನೆ:** ಭೀಮಾ ನದಿ ಪ್ರವಾಹದಿಂದಾಗಿ ಹಾನಿಗೆ ಒಳಗಾಗಿರುವ ಮನೆಗಳ ಅಂದಾಜು ಸಂಖ್ಯೆ

**3 ಲಕ್ಷ ಹೆಕ್ಟೇರ್:** ಪ್ರವಾಹ ಪೀಡಿತ 3 ಜಿಲ್ಲೆಗಳಲ್ಲಿ ಉಂಟಾಗಿರಬಹುದಾದ ಅಂದಾಜು ಬೆಳೆ ಹಾನಿ

# ಸಾಂಕ್ರಾಮಿಕ ತಡೆಗೆ ಸರ್ಕಾರ ಸಿದ್ಧ

## ಶುದ್ಧ ನೀರು, ಆರೋಗ್ಯ ತಪಾಸಣೆ, ಜಾಗೃತಿ । ಕೊರೋನಾ ತಡೆಗೆ ಮಾಸ್ಕ್, ಸ್ಯಾನಿಟೈಸರ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜ್ಯದ ಪ್ರವಾಹಪೀಡಿತ ಜಿಲ್ಲೆಯಲ್ಲಿ ಸಾಂಕ್ರಾಮಿಕ ರೋಗಗಳು ಹರಡುವ ಹಾಗೂ ಕೊರೋನಾ ಸೋಂಕು ತಗಲುವ ಭೀತಿ ಇರುವ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆ ಕ್ರಮಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಲು ಜಿಲ್ಲಾಡಳಿತಗಳಿಗೆ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಸೂಚನೆ ನೀಡಿದ್ದಾರೆ.

ಸೋಮವಾರ ವಿಕಾಸಸೌಧದಲ್ಲಿ ಬಾಗಲಕೋಟೆ, ವಿಜಯಪುರ, ಕಲಬುರಗಿ, ಯಾದಗಿರಿ, ಕೊಪ್ಪಳ ಮತ್ತು ಬೆಳಗಾವಿ ಜಿಲ್ಲೆಯ ಆಡಳಿತಗಳ ಜೊತೆ ವಿಡಿಯೋ ಸಂವಾದ ನಡೆಸಿ ಪ್ರವಾಹ ಪರಿಸ್ಥಿತಿ ಕುರಿತು ಅವರು ಪರಾಮರ್ಶೆ ನಡೆಸಿದರು.

ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಳಜಿ ಕೇಂದ್ರದಲ್ಲಿ ಆಶ್ರಯ ಪಡೆದಿರುವ ಸಂತ್ರಸ್ತರಿಗೆ ಶುದ್ಧ ಕುಡಿಯುವ ನೀರು ಮತ್ತು ಗುಣಮಟ್ಟದ ಆಹಾರ ಪೂರೈಸಬೇಕು.

↘ 7



### ಸಕಲ ನೆರವು

ಕರ್ನಾಟಕದಲ್ಲಿ ಉಂಟಾದ ಪ್ರವಾಹದಿಂದಾಗಿ ಸಂತ್ರಸ್ತರಾದ ಕುಟುಂಬಗಳಿಗೆ ಅಗತ್ಯ ನೆರವು ನೀಡಲಾಗುವುದು. ಈ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರ ಎಲ್ಲಾ ರೀತಿಯ ಪ್ರಯತ್ನ ಮಾಡುತ್ತಿದೆ.

• **ನರೇಂದ್ರ ಮೋದಿ** ಪ್ರಧಾನಮಂತ್ರಿ